# ಮಹಾವೃಕ್ಷದ ನೆರಳಿನಲ್ಲಿ ಚಿಗುರಿದ ಮಠದ ಬೀಜ

ಕೊಂಬೆ–10

ಆ ಪುಣ್ಯಾತ್ಮಗಿತ್ತಿ ತುಂಗಾ ಮತ್ತೆ ಕಾಳಿಂಗ ಯಾವ ಗಳಿಗೆಯಲ್ಲಿ ಬಂದು ನನ್ನ ಹೆಂಡತಿ ಅಂತ ಈ ಬೇವಿನಮರವನ್ನು ನನ್ನ ಪಕ್ಕ ತಂದು ನೆಟ್ಟರೋ... ಮೊದಮೊದಲು ಚಕಾರವನ್ನೇ ಎತ್ತದೇ ತೆಪ್ಪಗಿರುತ್ತಿತ್ತು. ನಾನು ಇಡೀ ಕಾಡಿನ ರಾಜನಂತೆ ಏಕಾಂಗಿಯಾಗಿ ತಲೆ ಎತ್ತಿ ಮೆರೆಯುತ್ತಿದ್ದೆ. ಆಗ ಇನ್ನೂ ದಟ್ಟ ಕಾಡು ಹಾಗೇ ಇದ್ದರೂ ನನ್ನಷ್ಟು ಬಲಿಷ್ಠವಾದ, ಎತ್ತರವಾದ, ವಿಶಾಲವಾದ ಮರಗಳು ಇರಲಿಲ್ಲ. ನನ್ನ ತುದಿಯಲ್ಲಿನ ಎಲೆಗಳು ದೂರದೂರದವರೆಗೆ ತಮ್ಮ ಪ್ರತಿಫಲನವನ್ನು ಬೀರಿ ನನಗೆ ಮಾಹಿತಿ ಕೊಡುತ್ತಿದ್ದವು. ಆಗುಂಬೆ ಬೆಟ್ಟದ ಮೇಲಿಂದ ಕಾಣುವ ಸೂರ್ಯಾಸ್ತದಂತೆ ನನ್ನ ಮೇಲಿಂದಲೂ ಸೂರ್ಯಾಸ್ತ ನೋಡಬಹುದಾಗಿತ್ತು. ಅಷ್ಟು ಎತ್ತರ ಬೆಳೆದುಬಿಟ್ಟಿದ್ದೆ. ಇನ್ನೂ ಎತ್ತರ, ಇನ್ನೂ ಎತ್ತರ ಬೆಳೆಯಬೇಕೆಂಬ ದಾಹ, ತಹತಹ ನನಗೆ ಇದ್ದೇ ಇತ್ತು. ಮುಗಿಲಾಚೆಗೆ ಬೆಳೆಯಬೇಕು, ಆ ಆಕಾಶದವರೆಗೆ ಚಾಚಿ, ಅಲ್ಲಿಂದ ಆ ಸೂರ್ಯನನ್ನೂ ಮುಟ್ಟಬೇಕೆಂಬುದು ನನ್ನ ಅಂತಿಮ ಆಸೆಯಾಗಿತ್ತು. ಅದೇ ಹೇಳಿದೆನಲ್ಲ, ಈ ಕಾಲೇಜುಗಳು ಬಂದ ಮೇಲೆಯೇ ನನಗೆ ಗೊತ್ತಾಗಿದ್ದು, ನಾನು ಏನೇ ಮಾಡಿದರೂ ಆ ಸೂರ್ಯನನ್ನು ಮುಟ್ಟಲು ಸಾಧ್ಯವಿಲ್ಲ. ಆ ಸೂರ್ಯ ನನ್ನಿಂದ ಕೋಟ್ಯಂತರ ಮೈಲಿ ದೂರದಲ್ಲಿದ್ದಾನೆಂದು. ಈ ಬೆಳಕು ಏನಿದೆಯಲ್ಲ, ಅದರ ವೇಗವೇ ಒಂದು ಸೆಕೆಂಡಿಗೆ ಮೂರು ಲಕ್ಷ ಕಿಲೋಮೀಟರ್ ಅಂತೆ. ಸೂರ್ಯನಿಂದ ಹೊರಟ ಅಂಥ ಬೆಳಕಿನ ಕಿರಣ ನನ್ನನ್ನು ತಲುಪಲು ಒಂಬತ್ತು ನಿಮಿಷ ಬೇಕಂತೆ. ಅಂಥದರಲ್ಲಿ ನಾನು ಅಷ್ಟು ದೂರ ಬೆಳೆಯಲು ಸಾಧ್ಯವೇ ಎಂಬ ಮನವರಿಕೆಯಾಗಿ ತೆಪ್ಪಗಾಗಿದ್ದೆ.

ಅಷ್ಟರಲ್ಲಿ ಚೋಟುದ್ದವಿದ್ದ ಈ ಬೇವಿನ ಗಿಡ ಆಗಲೇ ಎಂಟ್ಹತ್ತು ಅಡಿ ಬೆಳೆದುಬಿಟ್ಟಿತ್ತು. ನನ್ನ ಬೇರಿನ ಸಂದಿಯೊಳಗೇ ತನ್ನ ಬೇರುಗಳನ್ನೂ ತೂರಿಸಿತ್ತು. ಅನುಸರಿಸಿಕೊಂಡು ಹೋಗುವ ನನ್ನ ಸ್ವಭಾವದಿಂದಾಗಿ ಅದರ ಕೊಂಬೆಯೂ ನನ್ನ ಟಿಸಿಲುಗಳ ನಡುವೆ ತೂರಿಕೊಂಡು ಬಂದು ಒಂದು ರೀತಿ ನನ್ನನ್ನು ಆಲಂಗಿಸಿಕೊಂಡಂತೆ ಬೆಳೆದುಬಿಟ್ಟಿತ್ತು. ಹೋಗಲಿ ಎಂದು ಅದಕ್ಕೂ ಅವಕಾಶ ನೀಡಿದ್ದೆ. ಇನ್ನು ನನ್ನಿಂದ ಅದನ್ನು ಕಿತ್ತು ಬಿಸುಟಲು ಸಾಧ್ಯವಿಲ್ಲ ಎಂಬುದು ಯಾವಾಗ ಅದಕ್ಕೆ ಮನವರಿಕೆಯಾಯಿತೋ ಆಗ ಕಟ್ಟಿಕೊಂಡ ಹೆಂಡತಿಯಂತೆ ಮೆಲ್ಲಗೆ ತನ್ನ ವರಾತವನ್ನು ಶುರುಮಾಡಿತು. ಸಂಜೆಯಾಗುತ್ತಿದ್ದಂತೆಯೇ ನೆಲದ ಮೇಲಿನ ಚಟುವಟಿಕೆಗಳು

